ಕಡೂರು ಡಿಸ್ಟ್ರಿಕ್ಟ್.

ಸ್ಯ 1909ನೆ ಇಸವಿ ಏಪ್ರಿಲ್ ತಾರೀಖು 17.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, 1909ನೆ ಇಸವಿ ಜುಲೈ ಗುರ್ರಲಾಗಾಯಿತು 1910ನೆ ಇಸವಿ ಜೂ ಆಖೈರ್ ವರೆಗೆ 1 ವರುಷಕ್ಕೆ ಕಡೂರು ಡಿಸ್ಟ್ರಿಕ್ಟಿನಲ್ಲಿನ ಇಪ್ಪರಡಿ ಕಾಣಿಸಿರುವ ಟೋಲು ಗೇಟುಗಳಲ್ಲಿ ಟೋಲ್ ಯಾನೆ ಸುಂಕವನ್ನು ವಸೂಲು ಮಾಡುವ ಬಾಬನ್ನು ಡೆಪ್ಯುಟಿ ಕಮಿಷನರ್ ಯಾ ಅವರಿಂದ ಈ ಕೆಲಸಕ್ಕೆ ನೇಮಿಸಲ್ಪಟ್ಟ ಅಸಿಸ್ಟೆಂಟ್ ಕಮಿಷನರವರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ :—

ನಂಬರ್	ಟೋಲ್‌ಗೇಟು ಹೆಸರು.	ಹರಾಜು ತಾರೀಖು.	ಹರಾಜು ನಡೆಯುವ ಸ್ಥಳ.
1	ತಡಸ (ಭದ್ರಾನದಿಯ ಸೇತುವೆ) ...	6ನೆ ಮೇ 1909.	ಎಡೇಹಳ್ಳಿ ಸಬ್ ತಾಲ್ಲೂಕು ಕಛೇರಿಯಲ್ಲಿ.
2	ಹರಿಹರಪುರ (ತುಂಗಾನದಿ ಸೇತುವೆ) ...	4ನೆ ಡಿಟೋ	ಕೊಪ್ಪದ ತಾಲ್ಲೂಕು ಕಛೇರಿಯಲ್ಲಿ.
3	ಬಾಳೆಹೊನ್ನೂರು (ಭದ್ರಾನದಿ ಸೇತುವೆ)	1ನೆ ಡಿಟೋ	ಬಾಳೆಹೊನ್ನೂರು ಮುಸಾಫರ್ ಬಂಗಲೆಯಲ್ಲಿ.

2. ಎಲ್ಲಾ ಸವಾಲುಗಳಿಗಿಂತಲೂ ಜಾಸ್ತಿಯಾದ ಛಡ ದರಖಾಸ್ತು ಸರಿಯಾಗಿ ಕಂಡುಬಂದಲ್ಲಿ ಗವರ್ನಮೆಂಟ್ ಮಂಜೂರಿಗೆ ಬಳಪಟ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ಅಂಗೀಕರಿಸಲ್ಪಡುತ್ತೆ. ಛಡ ದರಖಾಸ್ತನ್ನಾಗಲಿ ಯಾ ಇತರ ದರಖಾಸ್ತನ್ನಾಗಲಿ ಯಾವ ಸಬಬನ್ನೂ ತಿಳಿಸದೇನೆ ಅಂಗೀಕರಿಸುವದಕ್ಕೆ ಯಾ ತಿರಸ್ಕರಿಸುವದಕ್ಕೆ ಡೆಪ್ಯುಟಿ ಕಮಿಷನರವರು ಅಧಿಕಾರ ಉಳಿಸಿಕೊಂಡಿರುತ್ತಾರೆ.

3. ಛಡ ದರಖಾಸ್ತುದಾರನು ಹರಾಜಾದ ಕೂಡಲೆ ಹರಾಜು ಮೊಬಲಗಿನ ಪೈಕಿ ಮೂರನೇ ಬಂದು ಅಂಶದ ಮೊಬಲಗನ್ನು ನಗದಾಗಿ ಅಥವಾ ಡೆಪ್ಯುಟಿ ಕಮಿಷನರವರಿಗೆ ಪಾವತಿ ಮಾಡಬಹುದೆಂಬ ಷರಾ ಬರಿಯಲ್ಪಟ್ಟ ಗವರ್ನಮೆಂಟ್ ಆಫ್ ಇಂಡಿಯಾ ಪ್ರೊನೋಟು ಮೂಲಕವಾಗಿ ಡಿಪಾಜಿಟ್ಟು ಇಡಬೇಕು. ಹಾಗೂ ರೂಪಾಯಿ ಬಂದರ ಬಂದಾಣಿಯಂತೆ ಆ ಮೊಬಲಗಿನ ಮೇಲೆ ಆಗುವ ಲೋಕಲ್ ಸೆಸ್ ಸಹಾ ಕೊಡಬೇಕು. ಗವರ್ನಮೆಂಟಿನಿಂದ ಹರಾಜು ಮಂಜೂರಾಗಿ ಬಂದಕೂಡಲೆ ಬಾಕಿ ಮೊಬಲಗನ್ನು ಲೋಕಲ್ ಸೆಸ್ ನಿಧಿ ಸದರಿ ಟೋಲ್‌ಗೇಟು ಯಾವ ತಾಲ್ಲೂಕಿನಲ್ಲಿದೆಯೋ ಆ ತಾಲ್ಲೂಕು ಖಜಾನೆಗೆ 1909ನೆ ಆಗಸ್ಟು ತಾರೀಖು 10ರ ಲಾಗಾಯಿತು ಸಮನಾದ ಎಂಟು ಖಿಸ್ತುಗಳಾಗಿ ಪ್ರತಿ ತಿಂಗಳ 10ನೆ ತಾರೀಖಿಗೆ ಪಾವತೀ ಮಾಡಬೇಕು. ಡಿಪಾಜಿಟ್ಟಿನ ಮೊಬಲಗು 9—10—11—12ನೆ ಖಿಸ್ತುಗಳಿಗೆ ಜಮೆ ಮಾಡಿಕೊಳ್ಳಲ್ಪಡುತ್ತೆ. ದರಖಾಸ್ತುದಾರನು ಮಾಹೆವಾರ್ ಖಿಸ್ತು ಮೊಬಲಗನ್ನು ತಪ್ಪದೆ ಕೊಡುತ್ತಾ ಬರುವದಕ್ಕೆ ಇಬ್ಬರನ್ನು ಜಾಮೀನು ಕೊಡಬೇಕು. ಮತ್ತು ಹರಾಜು ಮಂಜೂರು ಸಂಗತಿ ತಿಳಿದ ತಾರೀಖು ಲಾಗಾಯಿತು ಮೂರು ದಿವಸದ ಒಳಗೆ ಅವಶ್ಯಕವಿರುವ ಕರಾರನ್ನು ಛಾಪಾಕಾಗದದಲ್ಲಿ ಬರೆದುಕೊಡಬೇಕು. ತೇವಣಿ ಇಡದೇ ಇದ್ದರೆ ಅಥವಾ ಜಾಮೀನ್ ಕೊಡದೇ ಇದ್ದರೆ ಡಿಪಾಜಿಟ್ಟು ಮೊಬಲಗು ದಂಡವಾಗಿ ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತೆ ಮತ್ತು ಸದರಿ ಕಂಟ್ರಾಕ್ಟು ಎರಡನೇ ಹರಾಜು ಮಾಡಲ್ಪಡುವದು. ಹೀಗೆ ಮಾಡಿದ್ದರಲ್ಲಿ ಸರ್ಕಾರಕ್ಕೆ ಲುಕ್ಸಾನು ಸಂಭವಿಸಿದಲ್ಲಿ ಕಂಟ್ರಾಕ್ಟುದಾರನ ಅಥವಾ ಅವನ ಜಾಮೀನುದಾರರ ಜಿಂದಿಗೆ ಹರಾಜು ಮಾಡಿಸಿ ವಸೂಲು ಮಾಡಿಕೊಳ್ಳಲ್ಪಡುತ್ತೆ.

4. ಪ್ರತಿ ಮಾಹೆಯಲ್ಲಿಯೂ ಕೊಡತಕ್ಕ ಖಿಸ್ತು ಮೊಬಲಗನ್ನು ಗೊತ್ತು ಮಾಡಲ್ಪಟ್ಟ ತಾರೀಖಿನೊಳಗಾಗಿ ಪಾವತಿ ಮಾಡಲು ತಪ್ಪಿದರೆ ವರುಷ ಒಂದಕ್ಕೆ ಕೇಕಡ ಆರು ರೂಪಾಯಿಮೇರೆ ಬಡ್ಡಿ ಸೇರಿಸಿ ಖಿಸ್ತು ಮೊಬಲಗು ವಸೂಲ್ಮಾಡಲ್ಪಡುತ್ತೆ.

5. ಕಂಟ್ರಾಕ್ಟರು ಹರಾಜಿನಲ್ಲಿ ಪಡೆಯುವ ಮೊಬಲಗಿನ ಮೇಲೆ ರೂಪಾಯಿ 1ಕ್ಕೆ ಬಂದಾಣಿಯಂತೆ ಲೋಕಲ್ ಸೆಸ್ಸು ಕೊಡಲಿಕ್ಕೆ ಬದ್ಧನಾಗಿರುತ್ತಾನೆ.

6. ಕಂಟ್ರಾಕ್ಟರಿಂದ ಯಾ ಅವನ ಜಾಮೀನುದಾರ್‌ರಿಂದ ಬಾಕಿ ಮೊಬಲಗು ಬಾರದೇ ಇದ್ದಲ್ಲಿ ಲ್ಯಾಂಡ್ ರೆವಿನ್ಯೂ ಬಾಕಿ ವಸೂಲಿಗೆ ಹಾಲಿ ಜಾರಿಯಲ್ಲಿರುವ ನಿಬಂಧನೆ ಅನುಸರಿಸಿ ವಸೂಲ್ಮಾಡಲ್ಪಡುತ್ತೆ.

7. ಪ್ರತಿ ದಿವಸದ ಟೋಲ್ ವಸೂಲು ತೋರಿಸುವ ಲೆಖ್ಖವನ್ನು ಇಡಲು ಕಂಟ್ರಾಕ್ಟುದಾರನು ಬದ್ಧನಾಗಿರುವದಲ್ಲದೆ ಸದರಿ ಲೆಖ್ಖವು ಡೆಪ್ಯುಟಿ ಕಮಿಷನರ್, ಅಸಿಸ್ಟೆಂಟ್ ಕಮಿಷನರ್ ಮತ್ತು ಸದರಿ ಟೋಲ್ ಯಾವ ತಾಲ್ಲೂಕು ಅಥವಾ ಸಬ್ ತಾಲ್ಲೂಕಿನಲ್ಲಿದೆಯೋ ಆಯಾ ತಾಲ್ಲೂಕು ಅಮಲ್ದಾರ್ರ ಅಥವಾ ಸಬ್ ತಾಲ್ಲೂಕು ಅಮಲ್ದಾರ್ರ ಡೆಪ್ಯುಟಿ ಅಮಲ್ದಾರ್ರ ತನಿಖೆಗೆ ಬಳಗಾಗಿರತಕ್ಕದ್ದು.

8. ಕಂಟ್ರಾಕ್ಟರು ಇದರಡಿ ಕಾಣಿಸಿರುವ ಷೆಡ್ಯೂಲಿನಲ್ಲಿ ಕಂಡ ದರಗಳ ಪ್ರಕಾರವಲ್ಲದೆ ಅನ್ಯಥಾ ಟೋಲ್ ಸುಂಕವನ್ನು ವಸೂಲ್ ಮಾಡಕೂಡದು. ಹಾಗೆ ಮಾಡಿದ್ದಾದರೆ ಕಂಟ್ರಾಕ್ಟನ್ನು ರದ್ದು ಮಾಡಿಸುವದಲ್ಲದೆ ಕಂಟ್ರಾಕ್ಟುದಾರನನ್ನು ಕ್ರಿಮಿನಲ್ ತಪ್ಪು ಪ್ರಾಸಿಕ್ಯೂಷನ್‌ಗೆ ಗುರಿಪಡಿಸುತ್ತೆ.

9. ದಂಡು, ಮಿಲಿಟೆರಿ ಸಾಮಾನು ಅಥವಾ ಸರ್ಕಾರಿ ಡ್ಯೂಟಿಮೇಲೆ ಪ್ರಯಾಣಮಾಡುವ ಪೊಲೀಸು ಯಾ ಇತರ ಉದ್ಯೋಗ್ಯರ ಸರ್ಕಾರದ ಸಾಮಾನುಗಳು ಅಂದರೆ, ಸಂಬಂಧಪಟ್ಟ ಇಲಾಖಾ ಮೊಖ್ತೇಸರರ ಸರಟಿಫಿಕೇಟ್ ನಿಧಿ ಬರತಕ್ಕ ಸಾಮಾನುಗಳು ಇವುಗಳ ಮೇಲೆ ಕಂಟ್ರಾಕ್ಟುದಾರನು ಸುಂಕ ವಸೂಲ್ಮಾಡಕೂಡದು.

10. ಕಂಟ್ರಾಕ್ಟುದಾರನು ಸುಂಕ ವಸೂಲ್ಮಾಡುವ ಬಂದು ದರವಾರು ಪಟ್ಟಿಯನ್ನು ಇಂಗ್ಲೀಷ್ ಮತ್ತು ಕನ್ನಡದಲ್ಲಿ ಸ್ಪಷ್ಟವಾಗಿ ಬರದು ಟೋಲ್ ಗೇಟು ಬಳಿ ಚನ್ನಾಗಿ ಕಾಣುವ ಜಾಗಾದಲ್ಲಿ ತಗಲುಹಾಕಬೇಕು.

11. ಗವರ್ನ್‌ಮೆಂಟಿನಿಂದ ನೇಮಿಸಲ್ಪಟ್ಟ ಟೋಲ್‌ಗೇಟು ಬಳಿಯಲ್ಲಲ್ಲದೆ ಮತ್ತೆಲ್ಲಿಯೂ ಕಂಟ್ರಾಕ್ಟ್‌ದಾರನು ಸುಂಕವನ್ನು ವಸೂಲ್ಮಾಡಕೂಡದು.

12. ರೆವಿನ್ಯು ಇಲಾಖೆಯೊಂದಿಗೆ ಸುಂಕದ ತೆರಿಗೆ ವಿಚಾರದಲ್ಲಿ ಒಪ್ಪಂದ ಮಾಡಿಕೊಂಡ ಯಾವನೊಬ್ಬನಿಂದಲೂ ಕಂಟ್ರಾಕ್ಟ್‌ದಾರನು ಸುಂಕವನ್ನು ವಸೂಲ್ಮಾಡಕೂಡದು. ಈ ರೀತಿ ರೆವಿನ್ಯು ಇಲಾಖೆಯೊಂದಿಗೆ ಒಪ್ಪಂದ ಮಾಡಿಕೊಂಡ ಮೊಬಲಗನ್ನು ಹೊಂದಲು ಕಂಟ್ರಾಕ್ಟ್‌ದಾರನು ಸ್ವತಂತ್ರವುಳ್ಳವನಾಗುತ್ತಾನೆ.

13. ಇನ್ನೂ ಜಾಸ್ತಿ ಅಂಶವೇನಾದರೂ ತಿಳಿಯಬೇಕಾದಲ್ಲಿ ಕಡೂರು ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮಿಷನರ್ ಸಾಹೇಬರವರಿಗೆ ಬರೆಯುವದರ ಮೂಲಕ ತಿಳಿದುಕೊಳ್ಳಬಹುದು.

ಬಾಳೆಹೊನ್ನೂರು-ತಡಸ, ಹರಿಹರಪುರದ ಸೇತುವೆಗಳ ಮೇಲೆ ಇರುವ ಟೋಲ್ ಗೇಟುಗಳ ಬಳಿ ಸುಂಕ ವಸೂಲ್ಮಾಡುವ ದರಗಳ ಪಟ್ಟಿ:—

ನಂಬ್ರ	ತಪಶೀಲು.	ಭರ್ತಿ ಆಗಿದ್ದರೆ.			ಖಾಲಿ ಇದ್ದರೆ.		
		ರೂ.	ಆ.	ಪೈ.	ರೂ.	ಆ.	ಪೈ.
1	ನಾಲ್ಕು ಚಕ್ರದ ಗಾಡಿ 1ಕ್ಕೆ	0	8	0	0	8	0
2	ಎರಡುಚಕ್ರದ ಪೆಟ್ಟಿಗೆ ಗಾಡಿ ಅಥವಾ ಭಂಡಿ 1ಕ್ಕೆ	0	4	0	0	4	0
3	ಎಮ್ಮೆಗಳು, ಎತ್ತುಗಳು ರಾಸು 1ಕ್ಕೆ	0	0	6	0	0	3
4	ಆನೆ 1ಕ್ಕೆ	1	0	0	1	0	0
5	ಒಂಟೆ 1ಕ್ಕೆ	0	8	0	0	8	0
6	ಪ್ರತಿ ಕುದುರೆ ಹೊರೆ ಸಹಿತವಾಗಿದ್ದರೆ ಅಥವಾ ಸವಾರಿ ಮಾಡಲ್ಪಡುತ್ತಿದ್ದರೆ ...	0	1	0		...	
7	ಡಿಟ್ಟೋ ಹೊರೆ ಇಲ್ಲದ್ದು ಅಥವಾ ಹಿಡಿದುಕೊಂಡು ಹೋಗಲ್ಪಡುವದಕ್ಕೆ ...		...		0	1	0
8	ಪ್ರತಿ ಕತ್ತೆ ಹೊರೆ ಸಹಿತವಾಗಿದ್ದರೆ ಅಥವಾ ಸವಾರಿ ಮಾಡಲ್ಪಡುತ್ತಿದ್ದರೆ ...	0	0	6		...	

ನೋಟು:—ನಡದುಬರುವ ಮಾರ್ಗಸ್ಥರನ್ನೇಲೆ ಟೋಲ್ ವಸೂಲು ಮಾಡತಕ್ಕದ್ದಿಲ್ಲ.

ಜೆ. ಹನುಮಂತರಾವ್, ಫಾರ್ ಡೆಪ್ಯೂಟಿ ಕಮಿಷನರ್,

ಇಸ್ತಿಹಾರ್ನಾಮೆ.

ತಾರೀಖು 13ನೆ ಏಪ್ರೆಲ್ 1909.

ಸರ್ವೆ ನಂ. 1, ಎಕರೆ 162, ಗುಂಟೆ 10, ಆಕಾರ ರೂ. 243. ಮೂಡಗೆರೆ ತಾಲ್ಲೂಕು ಗೋಣಿಬೀಡು ಹೋಬಳಿ ಹಳೇಕೆರೆ ಎಸ್ಟೇಟ್ ಗ್ರಾವುಕ್ಕೆ ಮಿ॥ ಚಾರ್ಲಿಸ್ ಕಿಂಗ್ ಸಾಹೇಬರವರಿಂದ ಬರತಕ್ಕ ಬಾಕಿಗೋಸ್ಕರವಾಗಿ ಮಾರ್ಜಿನ್ನಲ್ಲಿ ಕಂಡ ತೋಟವು ಮೂಡಗೆರೆ ತಾಲ್ಲೂಕು ಕಚೇರಿಯಲ್ಲಿ 1909ನೆ ಮೇ ಮಾಹೆ 26ನೆ ತಾರೀಖು ಬುಧವಾರ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚಿನ ತಪಶೀಲ್ ಬಗ್ಗೆ 1909ನೆ ಏಪ್ರೆಲ್ 22ನೆ ಮುರ್ಕುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 264—265ನೆ ಪೇಜುಗಳನ್ನು ನೋಡತಕ್ಕದ್ದು.

ಕೆ. ಆರ್. ಶ್ರೀನಿವಾಸ್ಐಯ್ಯಂಗಾರ್,
ಡೆಪ್ಯೂಟಿ ಕಮಿಷನರ್.

ಚಿತ್ರದುರ್ಗ ಡಿಸ್ಟ್ರಿಕ್ಟು.

ಸ್ಟ 1909ನೆ ಇಸವಿ ಫೆಬ್ರವರಿ ತಿಂಗಳು 19ರಲ್ಲಿ ನಡೆದ ಚಿತ್ರದುರ್ಗದ ಡಿಸ್ಟ್ರಿಕ್ಟು ಬೋರ್ಡ್ ಮಿಟಂಗಿನ ಪ್ರೊಸೀಡಿಂಗ್ಸು.

ಹಾಜರು.

ಮಿ॥ ರಾ॥ ರಾ॥ ಎಂ. ಚಂಗಯ್ಯ ಶೆಟ್ಟರವರು, (ಪ್ರೆಸಿಡೆಂಟ್).

ಅಫಿಷಿಯಲ್ ಮೆಂಬರುಗಳು.

(1) ಡಿಸ್ಟ್ರಿಕ್ಟು ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರವರು.
(2) ಚಿತ್ರದುರ್ಗದ ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರು.
(3) ಚಿತ್ರದುರ್ಗ ಡಿಸ್ಟ್ರಿಕ್ಟು ಸ್ಕೂಲ್ ಇಲಾಖಾ ಡೆಪ್ಯೂಟಿ ಇನ್ಸ್ಪೆಕ್ಟರವರು.
(4) ಬೋರ್ಡಿನ ವೈಸ್ ಪ್ರೆಸಿಡೆಂಟರವರು.